ವಿಷಯ:- ಪುರಸಭೆ ನೌಕರರಿಗೆ ಸರ್ಕಾರಿ ಖಜಾನೆಯಿಂದ ಸಂಬಳ.

1077 (1755) ಶ್ರೀ ಬಿ. ನಂಜಾಮರಿ, (ತಿಪಟೂರು):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪುರಸಭಾ ನೌಕರರಿಗೆ ಸರ್ಕಾರಿ ಖಜಾನೆಯಿಂದ ಸಂಬಳ ನೀಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ?

ಆ) ಹಾಗಿದ್ದಲ್ಲಿ ಇದು ಯಾವಾಗಿನಿಂದ ಅನುಷ್ಠಾನಕ್ಕೆ ಬರುವುದು? ಇಲ್ಲದಿದ್ದಲ್ಲಿ ಇದರಲ್ಲಿರುವ ಅಡೆತಡೆಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಇಲ್ಲ.

ಆ) ಆದರೂ ಖಜಾನೆಯಲ್ಲಿ ಪ್ರತ್ಯೇಕವಾದ ಲೆಕ್ಕ ಶೀರ್ಷಿಕೆಯನ್ನು ತೆರೆಯಲು ಸರ್ಕಾರವು ಒಪ್ಪಿದೆ. ಸರ್ಕಾರವು ಪುರಸಭೆಗಳಿಗೆ ಬಿಡುಗಡೆ ಮಾಡಲಾಗುತ್ತಿರುವ ಎಲ್ಲಾ ಹಣವನ್ನು ಈ ಲೆಕ್ಕ ಶೀರ್ಷಿಕೆಯಲ್ಲಿ ಜಮಾ ಮಾಡಲಾಗುತ್ತಿದೆ. ಪುರಸಭೆಗಳು ಈ ಹಣವನ್ನು ಹಾಗೂ ಅವುಗಳ ಸ್ವಂತ ಹಣ ಕ್ರೋಢೀಕರಿಸಿ ನೌಕರರಿಗೆ ಸಂಬಳವನ್ನು ಪಾವತಿ ಮಾಡುತ್ತಿವೆ. ಪೌರ ಸೇವಾ ನೌಕರರು ಸರ್ಕಾರೀ ನೌಕರರಾಗಿಲ್ಲದಿರುವುದರಿಂದ ಇವರುಗಳಿಗೆ ಖಜಾನೆ ಮುಖಾಂತರ ಸರ್ಕಾರವು ಸಂಬಳವನ್ನು ಪಾವತಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ತಿಪಟೂರು ಪುರಸಭೆಯಲ್ಲಿ ನಡೆದ ಅಕ್ರಮ ವ್ಯವಹಾರಗಳು.

1078 (1753) ಶ್ರೀ ಬಿ. ನಂಜಾಮರಿ (ತಿಪಟೂರು):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1994–95ನೇ ಸಾಲಿನಲ್ಲಿ ತಿಪಟೂರು ಪುರಸಭೆಯಲ್ಲಿ ಹಿಂದೆ ನಡೆದಿದ್ದ ಅಕ್ರಮ ಅವ್ಯವಹಾರಗಳ ಬಗ್ಗೆ ಸರ್ಕಾರ ನಡೆಸಿದ ತನಿಖೆಯ ನಂತರ ಕೈಗೊಂಡಿರುವ ಕ್ರಮವೇನು?

ಆ) ಅಪರಾಧಿಗಳನ್ನು ಪತ್ತೆಹಚ್ಚಿ ಅವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಇ) ಇಲ್ಲದಿದ್ದಲ್ಲಿ ಅವರ ಮೇಲೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಈ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳಲು ಶಿಸ್ತು ಪ್ರಾಧಿಕಾರಿಗಳಾದ ನಿರ್ದೇಶಕರು ಪೌರಾಡಳಿತ ಇಲಾಖೆ ಹಾಗೂ ಜಿಲ್ಲಾಧಿಕಾರಿ, ತುಮಕೂರು ಇವರಿಗೆ ಸೂಚಿಸಲಾಗಿದೆ.

ಆ) ಪೌರಾಡಳಿತ ನಿರ್ದೇಶಕರು ಹಾಗೂ ತುಮಕೂರು ಜಿಲ್ಲಾಧಿಕಾರಿಗಳು ಅಪರಾಧಿಗಳನ್ನು ಗುರುತಿಸಿ ಅವರ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳುತ್ತಿದ್ದಾರೆ.

ಇ) ಉದ್ಭವಿಸುವುದಿಲ್ಲ.